ವಿವಿಧ ಯೋಜನೆಗಳು

2074 (2582); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ)

ಅ) ಮೀನುಗಾರಿಕೆ ಇಲಾಖೆಯಿಂದ ದೊರೆಯುವ ವಿವಿಧ ಬಗೆಯ ರಿಯಾಯತಿ ಹಾಗೂ ಇತರ ಯೋಜನೆಗಳ ಸೌಲಭ್ಯಗಳು ಯಾವುವು ಅವುಗಳನ್ನು ಪಡೆಯಲು ನಿಗದಿಪಡಿಸಿರುವ ಮಾನದಂಡವೇನು;

ಆ) ದಿನಾಂಕ: 01-06-2013 ರಿಂದ 28-02-2015ರ ಅವಧಿಯಲ್ಲಿ ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರಿಯಾಯತಿ ಮತ್ತು ರಿಯಾಯತಿ ಇಲ್ಲದ ಹಾಗೂ Planned and Non-Planned ಸೌಲಭ್ಯದ ಯೋಜನೆಯಲ್ಲಿ ತಾಲ್ಲೂಕಿನ ಯಾವ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ (ಗ್ರಾಮವಾರು, ವರ್ಷವಾರು ಮತ್ತು ಯೋಜನೆವಾರು ಮಾಹಿತಿ ಒದಗಿಸುವುದು);

ಇ) ಸರ್ಕಾರವು ಈಗಾಗಲೇ ನಿಗದಿಪಡಿಸಿದ ರೂಪರೇಷೆಗಳಿಗನುಗುಣವಾಗಿ ಸೌಲಭ್ಯಗಳು ರಾಜ್ಯದ ಮೀನುಗಾರರಿಗೆ ದೊರಕಿದೆಯೆ; ಇಲ್ಲವಾದಲ್ಲಿ, ಪರ್ಯಾಯ ಕ್ರಮ ವನ್ನೇನಾದರೂ ಸರ್ಕಾರವು ಕೈಗೊಳ್ಳುವುದೆ;

ಈ) ಮುಂಬರುವ ಸಾಲಿಗೆ ಇಲಾಖೆಯಿಂದ ಒದಗಿಸಲಾಗುವ ಸೌಲಭ್ಯಗಳು ಹಾಗೂ ಯೋಜನೆಯ ವಿವರಗಳೇನು?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಮೀನುಗಾರಿಕೆ ಇಲಾಖೆಯಿಂದ ದೊರೆಯುವ ವಿವಿಧ ಬಗೆಯ ರಿಯಾಯತಿ ಹಾಗೂ ಇತರ ಯೋಜನೆಗಳ ಸೌಲಭ್ಯಗಳು ಮತ್ತು ಅವುಗಳನ್ನು ಪಡೆಯಲು ನಿಗದಿಪಡಿಸಿರುವ ಮಾನದಂಡದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.

ಆ) ದಿನಾಂಕ: 01–06–2013 ರಿಂದ 28–02–2015ರ ಅವಧಿಯಲ್ಲಿ ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಯೋಜನಾ ಕಾರ್ಯಕ್ರಮಗಳಲ್ಲಿ ಒದಗಿಸಲಾಗಿರುವ ಸೌಲಭ್ಯಗಳ ಗ್ರಾಮವಾರು, ವರ್ಷವಾರು ಮತ್ತು ಕಾರ್ಯಕ್ರಮವಾರು ಮಾಹಿತಿಯನ್ನು **ಅನುಬಂಧ–2** ರಲ್ಲಿ ಒದಗಿಸಲಾಗಿದೆ. ಯೋಜನೇತರ ಅನುದಾನದಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳು ಇರುವುದಿಲ್ಲ.

ಇ) ಮೀನುಗಾರಿಕೆ ಇಲಾಖೆಯಿಂದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸರ್ಕಾರವು ಈಗಾಗಲೇ ನಿಗದಿಪಡಿಸಿದ ರೂಪರೇಷೆಗಳಿಗನುಗುಣವಾಗಿ ಮೀನುಗಾರರಿಗೆ ಒದಗಿಸಲಾಗುತ್ತಿದೆ.

ಈ) ಮುಂಬರುವ ಸಾಲಿಗೆ ಇಲಾಖೆಯಿಂದ ಒದಗಿಸಲು ಪ್ರಸ್ತಾಪಿಸಿರುವ ಸೌಲಭ್ಯಗಳು ಹಾಗೂ ಯೋಜನೆಯ ವಿವರಗಳನ್ನು **ಅನುಬಂಧ–3** ರಲ್ಲಿ ಒದಗಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎ. ಹೆಚ್.ಶಿ ಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ನಿಪ್ಪಾಣಿ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2582ರ

ಅನುಬಂಧ-1

ಮೀನುಗಾರಿಕೆ ಇಲಾಖೆಯಿಂದ ದೊರೆಯುವ ವಿವಿಧ ಬಗೆಯ ರಿಯಾಯಿತಿ ಹಾಗೂ ಇತರ ಯೋಜನೆಗಳ ವಿವರ

ಕ್ರ. ಸಂ.	ಯೋಜನೆಗಳು	ಪ್ರಮುಖ ಮಾನದಂಡ
	ರಾಜ್ಯ ಪಲಯ ಯೋಜನೆಗಳು	
1	ಮೀನು ಮರಿ ಖರೀದಿಸಲು ನೆರವು	ಮೀನುಕೃಷಿಯಲ್ಲಿ ತೊಡಗಿದ್ದು, ಮೀನುಮರಿಗಳನ್ನು ಸರ್ಕಾರಿ ಅಥವಾ ನೋಂದಾಯಿತ ಕೇಂದ್ರಗಳಿಂದ ಖರೀದಿಸಬೇಕು.
2	ಸಂಕಷ್ಟ ಪರಿಹಾರ ನಿಧಿ	ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತರಾದರೆ/ಗಾಯಗೊಂಡರೆ/ಸ್ಥಿತ್ತು ನಷ್ಟವಾದರೆ ಪರಿಹಾರ ನೀಡಲಾಗುವುದು.
3	ಮತ್ಸ್ಯಾಶ್ರಯ ಯೋಜನೆ	ವಸತಿರಹಿತ ಮೀನುಗಾರರಾಗಿದ್ದು ಸ್ವಂತ ನಿವೇಶನ ಹೊಂದಿರಬೇಕು.
4	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ	ಸಕ್ರಿಯ ಮೀನುಗಾರರಾಗಿರಬೇಕು.
5	ವಿಶೇಷ ಘಟಕ ಯೋಜನೆ	ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಮತ್ತು ಮೀನುಗಾರಿಕೆಯಲ್ಲಿ ತೊಡಗಿರುವವರಾಗಿರಬೇಕು.
6	ಗಿರಿಜನ ಉಪಯೋಜನೆ	ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ಮತ್ತು ಮೀನುಗಾರಿಕೆಯಲ್ಲಿ ತೊಡಗಿರುವವರಾಗಿರಬೇಕು.
7	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಸಕ್ರಿಯ ಮೀನುಗಾರರಾಗಿರಬೇಕು.
8	ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ	ಮೀನುಗಾರಿಕೆಗಾಗಿ ನಿರ್ಮಿಸಿದ ಮಂಜುಗಡ್ಡೆ ಕಾರ್ಖಾನೆಯಾಗಿರಬೇಕು.
9	ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ಕುಂದಿಕೊಡುವುದು	ಅನುಮೋದಿತ ಮೀನುಗಾರಿಕೆ ಚಟುವಟಿಕೆಗಳಿಗಾಗಿ ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲ ಪಡೆದಿರಬೇಕು.
10	ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ	ಸಕ್ರಿಯ ಮೀನುಗಾರರಾಗಿರಬೇಕು.
11	ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ	ಮೀನುಮರಿ ಸಾಕಾಣಿಕೆಯಲ್ಲಿ ತೊಡಗಿರಬೇಕು ಮತ್ತು ಇಲಾಖೆಯಲ್ಲಿ ನೋಂದಾಯಿತರಾಗಿರಬೇಕು.

12	ಮೀನುಗಾರಿಕೆ ಮಾಹಿತಿಯನ್ನು ಮೊಬೈಲ್ ಆಪ್ ಸೇವೆಗಳ ಮೂಲಕ ನೀಡುವುದು	ಕಿಸಾನ್ ಪೋರ್ಟಲ್‌ನಲ್ಲಿ ನೋಂದಾಯಿತ ಮೀನುಗಾರರಿಗೆ ಎಸ್.ಎಂ.ಎಸ್. ಕಳುಹಿಸಲಾಗುವುದು.
	ಕೇಂದ್ರ ಪುರಸ್ಕೃತ ಯೋಜನೆಗಳು (ರಾಜ್ಯ ವಲಯ)	
1	ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣ ಯೋಜನೆ ಅ. ಸಾಮೂಹಿಕ ವಿಮಾ ಯೋಜನೆ ಆ. ಹುಟ್ಟೋ ನೆರವಿನ ಮತ್ಸ್ಯಾಶ್ರಯ ಯೋಜನೆ ಇ. ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ	ಮೀನುಗಾರರ ಸಹಕಾರ ಸಂಘಗಳ ಸದಸ್ಯರಾಗಿರಬೇಕು ಕರಾವಳಿ ಮೀನುಗಾರರು ಸಹಕಾರ ಸಂಘಗಳ ಸದಸ್ಯರಾಗಿರಬೇಕು ಮತ್ತು ಮೀನುಗಾರಿಕೆ ಅವಧಿಯಲ್ಲಿ ನಿಗದಿಪಡಿಸಿದ ಮೊತ್ತವನ್ನು ಉಳಿತಾಯ ಮಾಡಿರಬೇಕು.
2	ಅಂತರ್ವರ್ತಿ ಮೀನುಗಾರಿಕೆ ದೋಣಿಗಳ ಆಳವಡಿಕೆ	ಮೀನುಗಾರಿಕೆ ದೋಣಿಗಳನ್ನು ನಿರ್ಮಿಸಲು ಸಾಧ್ಯತಾ ಪ್ರಮಾಣ ಪತ್ರ ಪಡೆದಿರಬೇಕು.
	ಜಿಲ್ಲಾ ಪಂಚಾಯತ್ ಯೋಜನೆಗಳು	
1	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಅ. ಹುಲ್ಲುಗೆಂಡೆ ಮೀನು ಮರಿ ಸರಬರಾಜಿಗೆ ಸಹಾಯ ಆ. ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಇ. ಮೀನುಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ	ಸಕ್ರಿಯ ಮೀನುಗಾರರಾಗಿರಬೇಕು.
2	ಮೀನು ಮಾರುಕಟ್ಟೆ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಸಹಾಯ	ಮೀನು ಮಾರಾಟದಲ್ಲಿ ತೊಡಗಿರಬೇಕು.
3	ಕೇಂದ್ರ ಪುರಸ್ಕೃತ ಸಾಂಪ್ರದಾಯಿಕ ದೋಣಿಗಳ ಮೋಟಾರೀಕರಣ ಯೋಜನೆ	ಸಾಂಪ್ರದಾಯಿಕ ದೋಣಿ ಹೊಂದಿರಬೇಕು.
	ಇತರ ಯೋಜನೆಗಳು	
1	ಯಾಂತ್ರಿಕ ಮೀನುಗಾರಿಕೆಗೆ ರಾಜ್ಯ ಕರ ರಹಿತ ಡೀಸಲ್ ಪೂರೈಕೆ	ಯಾಂತ್ರಿಕ ಮೀನುಗಾರಿಕೆ ದೋಣಿಯನ್ನು ಹೊಂದಿರಬೇಕು
2	ಕೆರೆಗಳ ಅಭಿವೃದ್ಧಿ	ಗುತ್ತಿಗೆ ಪಡೆಯಲು ಮೀನುಗಾರರ ಸಹಕಾರ ಸಂಘವಾಗಿರಬೇಕು ಮತ್ತು ಉಳಿದ ಕೆರೆಗಳನ್ನು ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಮತಿ ಹೊಲ್ಕೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2582ರ

ಅನುಬಂಧ-2

2013-14 ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಫಲಾನುಭವಿಗಳ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಸಹಾಯಧನದ ಮೊತ್ತ ಹಾಗೂ ವಿತರಿಸಿದ ಸಾಮಗ್ರಿಗಳ ವಿವರ (Cash/Material)	ಷರಾ
	ಜಿಲ್ಲಾ ವಲಯ ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿ		
1	ಶ್ರೀ. ಸುರೇಶ ಅಣ್ಣಪ್ಪ ಬಾಗಡಿ, ಸಾ: ಸದಲಗಾ	10000/-	ಮೊಪೆಡ್ ಖರೀದಿಸಲು ಸಹಾಯಧನ ನೀಡಲಾಗಿದೆ
2	ಶ್ರೀ. ರಮೇಶ ಅಣ್ಣಾಸಾಹೇಬ ಘಾಟಗೆ, ಸಾ: ಸದಲಗಾ	10000/-	
	ರಾಜ್ಯ ವಲಯ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ		
1	ಶ್ರೀ. ಸಿದ್ರಾಮ ಶ್ಯಾಮರಾವ್ ಕೆಳ್ಳಕೇತ ಸಾ: ಆಂಕಲಿ	10000	ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು ವಿತರಿಸಲಾಗಿದೆ
2	ಶ್ರೀ. ದತ್ತಾ ಶ್ಯಾಮರಾವ ಬಾಗಡಿ ಸಾ: ಸದಲಗಾ	10000	
3	ಶ್ರೀ. ಶಿವಾಜಿ ಬಾಳು ಬಾಗಡಿ ಸಾ: ಸದಲಗಾ	10000	
4	ಶ್ರೀರವೀಂದ್ರ ಗಣಪತಿ ಬಾಗಡಿ ಸಾ: ಸದಲಗಾ	10000	
5	ಶ್ರೀ. ನಾಮದೇವ ಹಣಮಂತ ವಡ್ಡರ ಸಾ: ಸದಲಗಾ	10000	
6	ಶ್ರೀ. ಮಾರುತಿ ತಾಯಪ್ಪ ವಡ್ಡರ ಸಾ: ಸದಲಗಾ	10000	
	ರಾಜ್ಯ ವಲಯ ಮಹಿಳಾ ಮೀನುಗಾರರಿಗೆ ಶಾಖಿ ನಿರೋಧಕ ಪೆಟ್ಟಿಗೆ ಉಚಿತವಾಗಿ ನೀಡುವ ಯೋಜನೆ		
1	ದೊಂಡುಬಾಯಿ ಶ್ರೀಪತಿ ಬಾಗಡಿ ಸಾ: ಸದಲಗಾ		ಉಚಿತವಾಗಿ ಶಾಖಿ ನಿರೋಧಕ ಪೆಟ್ಟಿಗೆ ನೀಡಲಾಗಿದೆ
2	ಸುವರ್ಣಾ ದಗಡು ಬಾಗಡಿ ಸಾ: ಸದಲಗಾ		
3	ಪಾರ್ವತಿ ವಸಂತ ಬಾಗಡಿ ಸಾ: ಸದಲಗಾ		
4	ಅನುಸಯ್ಯಾ ಬಾಲು ಬಾಗಡಿ ಸಾ: ಸದಲಗಾ		
	ರಾಜ್ಯ ವಲಯ ಜೀವ ರಕ್ಷಕ ಸಾಧನ ಸಾಮಗ್ರಿಗಳ ಖರೀದಿಗಾಗಿ ಸರಪು ಯೋಜನೆ		
1	ದಶರಥ ಶ್ರೀಪತಿ ಬಾಗಡಿ ಸಾ:ಸದಲಗಾ	ಉಚಿತವಾಗಿ ಲೈಫ್ ಜಾಕೆಟ್ ವಿತರಿಸಲಾಗಿದೆ ಉಚಿತವಾಗಿ	ಉಚಿತವಾಗಿ ಲೈಫ್ ಜಾಕೆಟ್ ವಿತರಿಸಲಾಗಿದೆ
2	ಶಿವಾಜಿ ಬಾಳು ಬಾಗಡಿ ಸಾ:ಸದಲಗಾ		
3	ದತ್ತಾ ಶಾಮರಾವ ಬಾಗಡಿ ಸಾ:ಸದಲಗಾ		
	ರಾಜ್ಯ ವಲಯ ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಪರಿಗೋಲುಗಳ ವಿತರಣೆ ಯೋಜನೆ		
1	ಶ್ರೀ. ಆನಂದ ಕೃಷ್ಣಾ ಬಾಗಡಿ ಸಾ: ಶಮನೇವಾಡಿ	10000	ಮೀನುಗಾರರಿಗೆ ಫೈಬರ ಗ್ಲಾಸ್ ಪರಿಗೋಲುಗಳ ವಿತರಣೆ ಮಾಡಲಾಗಿದೆ
2	ಶ್ರೀ. ಶಾನಾಜಿ ಲಕ್ಷ್ಮಣ ಬಾಗಡಿ ಸಾ: ಯಕ್ಸಂಬಾ	10000	
3	ಶ್ರೀ. ರಾಜು ಮಾರುತಿ ಬಾಗಡಿ ಸಾ: ದೋರಗಾವ್	10000	
4	ಶ್ರೀ.ಮಹಾದೇವ ದೊಂಡಿರಾಮ ಬಾಗಡಿ ಸಾ:ದೋರಗಾವ್	10000	
5	ಶ್ರೀ. ಶಾನಾಜಿ ಆಪ್ಪಾ ಬಾಗಡಿ ಸಾ: ಕುನ್ನೂರ	10000	
6	ಶ್ರೀ. ಸುರೇಶ ಅಣ್ಣಪ್ಪ ಬಾಗಡಿ ಸಾ: ಸದಲಗಾ	10000	

2014-15 ನೇ ಸಾಲಿನಲ್ಲಿ (28.02.2015 ರ ಅಂತ್ಯಕ್ಕೆ) ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಫಲಾನುಭವಿಗಳ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಸಹಾಯಧನದ ಮೊತ್ತ ಹಾಗೂ ವಿತರಿಸಿದ ಸಾಮಗ್ರಿಗಳ ವಿವರ (Cash/Material)	ಷರಾ
	ಜಿಲ್ಲಾ ವಲಯ ಮೀನು ಮಾರುಕಟ್ಟೆ ಮತ್ತು ಮತ್ಸ್ಯಾಹಾರಿ		
1	ರಾಜು ಮಾರುತಿ ಬಾಗಡಿ, ಸಾ:ಬೋರಗಾಂವ	10000/-	ಮೊಪೆಡ್ ಖರೀದಿಸಲು ಸಹಾಯಧನ ನೀಡಲಾಗಿದೆ
2	ಶಾನಾಜ ಲಕ್ಷ್ಮಣ ಬಾಗಡಿ, ಸಾ:ಯಕ್ಸಂಬಾ	10000/-	
	ರಾಜ್ಯ ವಲಯ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ	"	
1	ಶ್ರೀ ಸಿದ್ರಾಮ ಶಿವಾಜಿ ಕಲ್ಲಿಕತ್ತ, ಸಾ: ಆಂಕಲಿ	10000/-	ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ವಿತರಿಸಲಾಗಿದೆ
2	ಶ್ರೀ ಮಾರುತಿ ಶಿವಲಿಂಗ ಕಲ್ಲಿಕತ ಸಾ: ಆಂಕಲಿ	10000/-	
3	ಶ್ರೀ ಬಸವ್ವಾ ಕಲ್ಲಪ್ಪಾ ಕಲ್ಲಿತ ಸಾ: ಆಂಕಲಿ	10000/-	
4	ಶ್ರೀ ದಶರಥ ಶ್ರೀಪತಿ ಬಾಗಡಿ ಸಾ: ಸದಲಗಾ	10000/-	
5	ಶ್ರೀ ನಾಮದೇವ ಮಸಂತ ಬಾಗಡಿ ಸಾ: ಸದಲಗಾ	10000/-	
6	ಶ್ರೀ ಆಣ್ಣಾಸಾಬ ಜಾಸು ಬಾಗಡಿ ಸಾ: ಸದಲಗಾ	10000/-	
7	ಶ್ರೀ ಶಿವಾಜಿ ಮಂ. ಗೋಸಾವಿ ಸಾ: ಬೋರಗಾಂವ	10000/-	
	ರಾಜ್ಯ ವಲಯ ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಪರಿಗೋಲುಗಳ ವಿತರಣೆ ಯೋಜನೆ		
1	ಶ್ರೀ ಬಾಳು ಅರ್ಜುನ ಕಲಿಕತ ಸಾ: ಆಂಕಲಿ	10000/-	ಮೀನುಗಾರರಿಗೆ ಫೈಬರ ಗ್ಲಾಸ್ ಪರಿಗೋಲುಗಳ ವಿತರಣೆ ಮಾಡಲಾಗಿದೆ.
2	ಶ್ರೀ ಸಂಜು ಸುಬ್ಬಣ್ಣಾ ಕಲಿಕತ ಸಾ: ಆಂಕಲಿ	10000/-	
3	ಶ್ರೀ ಆಪ್ಪಾಸಾಬ ಮಂಡಲಿಕ ಗೋಸಾವಿ ಸಾ: ಬೋರಗಾಂವ	10000/-	
4	ಶ್ರೀ ದಗಡು ಮಾಯಪ್ಪಾ ಬಾಗಡಿ ಸಾ:ಕುನ್ನೂರ	10000/-	
5	ಶ್ರೀ ಕೇರಬಾ ಆಪ್ಪಾ ಬಾಗಡಿ ಸಾ: ಸದಲಗಾ	10000/-	

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2582ರ

ಅನುಬಂಧ–3

ಮುಂಬರುವ ಸಾಲಿಗೆ ಇಲಾಖೆಯಿಂದ ಒದಗಿಸಲು ಪ್ರಸ್ತಾಪಿಸಿರುವ ಸೌಲಭ್ಯ ನೀಡುವ ಯೋಜನೆಗಳ ವಿವರ

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ
2. ಮೀನು ಮರಿ ಖರೀದಿಸಲು ನೆರವು
3. ಜಲಾಶಯದಲ್ಲಿ ಮೀನು ಮರಿ ಬಿತ್ತನೆ
4. ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ದೋಣಿಗಳ ವಿತರಣೆ
5. ಮೀನುಗಾರಿಕೆ ಬಂದರುಗಳ ಅಭಿವೃದ್ಧಿ ಮತ್ತು ನಿರ್ವಹಣೆ
6. ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು
7. ಮತ್ಸ್ಯಾಶ್ರಮ ಯೋಜನೆ
8. ಅಂತರ್ವರ್ತಿ ದೋಣಿಗಳ ಅಳವಡಿಕೆ
9. ಮೀನು ಮಾರುಕಟ್ಟೆ ನಿರ್ಮಾಣಕ್ಕೆ ನೆರವು
10. ಸಂಶೋಧನೆ, ವಿಸ್ತರಣೆ, ವಸ್ತು ಪ್ರದರ್ಶನ ಮತ್ತು ತರಬೇತಿ
11. ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ
12. ಮಂಜುಗಡ್ಡೆ ಸ್ಥಾಪರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ
13. ಮೀನುಗಾರರ ಕಲ್ಯಾಣ ಯೋಜನೆಯಡಿ ಮನೆಗಳ ನಿರ್ಮಾಣ, ಉಳಿತಾಯ ಮತ್ತು ಪರಿಹಾರ ಯೋಜನೆ ಮತ್ತು ಸಾಮೂಹಿಕ ಅಪಘಾತ ವಿಮಾಯೋಜನೆ
14. ಕರಾವಳಿ ಕೂಡು ರಸ್ತೆಗಳ ನಿರ್ವಹಣೆ
15. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನ
16. ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು.

17. ಮೀನು ತಳಿಗಳು (ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳ ಆಧುನೀಕರಣ)
18. ಯಾಂತ್ರಿಕ ಮೀನುಗಾರಿಕೆಗೆ ರಾಜ್ಯ ಕರ ರಹಿತ ಡೀಸೆಲ್ ಪೂರೈಕೆ

ಮೀನುಗಾರಿಕೆ ಮೇಲಣ ಬಂಡವಾಳ ಕಾರ್ಯಕ್ರಮ

19. ಮೀನುಗಾರಿಕೆ ಬಂದರು ನಿರ್ಮಾಣ– ಕೇಂದ್ರ ಪುರಸ್ಕೃತ ಯೋಜನೆ
20. ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳಲ್ಲಿ ಹೂಳೆತ್ತುವುದು –ಕೇಂದ್ರ ಪುರಸ್ಕೃತ ಯೋಜನೆ
21. ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ನವೀಕರಣ
22. ನಬಾರ್ಡ್ ನೆರವಿನ ಆರ್.ಐ.ಡಿ.ಎಫ್ ಯೋಜನೆಯಡಿ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ.

ಜಿಲ್ಲಾ ಪಂಚಾಯತ್ ಯೋಜನೆಗಳು

1. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ
2. ಸಾಂಪ್ರದಾಯಿಕ ದೋಣಿಗಳ ಮೋಟರೀಕರಣ–ಕೇಂದ್ರ ಪುರಸ್ಕೃತ ಯೋಜನೆ
3. ಪ್ರದರ್ಶನಗಳು ಮತ್ತು ತರಬೇತಿ
4. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ
5. ಮೀನು ಮಾರುಕಟ್ಟೆ ನಿರ್ಮಾಣ ಮತ್ತು ಮೀನು ಮಾರಾಟಕ್ಕಾಗಿ ಸಹಾಯ